International Journal of Kannada Research
www.kannadajournal.com

ISSN: 2454–5813
IJKR 2020; 6(2): 80-83
© 2020 IJKR
www.kannadajournal.com
Received: 08-02-2020
Accepted: 10-03-2020

**ಡಾ.ಹೇಮಾಂಬರ ಎಚ್.ಎಸ್**
ಬೋಧಕರು, (ಆರ್‌ಜಿಎಸ್‌ಎ) ಅಬ್ದುಲ್ ನಜೀರ್‌ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆ, ಆಡಳಿತ ತರಬೇತಿ ಸಂಸ್ಥೆ ಕ್ಯಾಂಪಸ್ ಮೈಸೂರು, ಕರ್ನಾಟಕ, ಭಾರತ

**ಪ್ರಮೋದ ಎಂ. ಚಾಂದಕಾವಟೆ**
ಬೋಧಕರು, (ಭೂ ಮತ್ತು ಜಲ ಸಂಪನ್ಮೂಲ) ಅಬ್ದುಲ್ ನಜೀರ್ಜಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆ, ಆಡಳಿತ ತರಬೇತಿ ಸಂಸ್ಥೆ ಕ್ಯಾಂಪಸ್ ಮೈಸೂರು, ಕರ್ನಾಟಕ, ಭಾರತ

**Corresponding Author:**
**ಡಾ.ಹೇಮಾಂಬರ ಎಚ್.ಎಸ್**
ಬೋಧಕರು, (ಆರ್‌ಜಿಎಸ್‌ಎ) ಅಬ್ದುಲ್ ನಜೀರ್‌ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆ, ಆಡಳಿತ ತರಬೇತಿ ಸಂಸ್ಥೆ ಕ್ಯಾಂಪಸ್ ಮೈಸೂರು, ಕರ್ನಾಟಕ, ಭಾರತ

# ಗ್ರಾಮ ಪಂಚಾಯತಿಗಳಲ್ಲಿ ಮಹಿಳಾ ಗ್ರಾಮಸಭೆಯ ಆಯೋಜನೆ ಮಾಡುವ ಕುರಿತು ಒಂದು ಅಧ್ಯಯನ

**ಡಾ.ಹೇಮಂಬರ ಎಚ್.ಎಸ್ ಮತ್ತು ಪ್ರಮೋದ ಎಂ ಚಂದಕಾವಟೆ**

## ಪೀಠಿಕೆ

ಗ್ರಾಮಪಂಚಾಯತಿಗಳು ಸ್ಥಳೀಯ ಸ್ವಯಂ ಸರ್ಕಾರವಾಗಿದ್ದು, ಗ್ರಾಮಸಭೆಗಳು ಗ್ರಾಮದ ವಿಧಾನ ಸಭೆಯಾಗಿ ಕಾರ್ಯನಿರ್ವಹಿಸುತ್ತಿವೆ. ಗ್ರಾಮದ ಮತದಾರರ ಹಾಗೂ ನಾಗರೀಕರ ಅಗತ್ಯತೆಗಳನ್ನು ಮತ್ತು ಅವಶ್ಯಕತೆಗಳನ್ನು ಆಲಿಸುವ ಮತ್ತು ಸೌಕರ್ಯಗಳನ್ನು ಒದಗಿಸುವ ಸರ್ಕಾರವಾಗಿದೆ. ಗ್ರಾಮದ ಸರಿಸುಮಾರು ಅರ್ಧದಷ್ಟು ಜನಸಂಖ್ಯೆಯನ್ನು ಪ್ರತಿನಿಧಿಸುವ ಮಹಿಳೆಯರು ಸಾಮಾಜಿಕ ಕಟ್ಟು ಪಾಡುಗಳಿಂದಾಗಿ ಸಾಮಾನ್ಯ ಸಭೆಗಳಲ್ಲಿ ಕಡಿಮೆ ಸಭೆಗಳಲ್ಲಿ ಭಾಗವಹಿಸುತ್ತಿದ್ದು, ಮಹಿಳೆಯರ ಅಗತ್ಯತೆಗಳು ಮತ್ತು ಬೇಡಿಕೆಗಳು ನಿರೀಕ್ಷಿತ ಪ್ರಾಮುಖ್ಯತೆಯನ್ನು ಪಡೆದುಕೊಂಡಿರುವುದಿಲ್ಲ. ಇದರ ಪರಿಣಾಮವಾಗಿ ಮಹಿಳೆಯರು ಸ್ಥಳಿಯ ಸರ್ಕಾರದ ನಿರ್ಣಯಗಳಲ್ಲಿ ಪರಿಣಾಮಕಾರಿಯಾಗಿ ಭಾಗವಹಿಸಲು ಸಾಧ್ಯವಾಗುತ್ತಿಲ್ಲ ಎಂಬ ಅಭಿಪ್ರಾಯವಿದೆ.

ಈ ಹಿನ್ನೆಲೆಯಲ್ಲಿ ಪ್ರತಿ ವರ್ಷ ಮಾರ್ಚ್ 08 ರಂದು ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಆಚರಿಸುವ ಅಂಗವಾಗಿ ಗ್ರಾಮಪಂಚಾಯತಿಗಳು ಕಡ್ಡಾವಾಗಿ ಮಹಿಳಾ ವಿಶೇಷ ಗ್ರಾಮಸಭೆಗಳನ್ನು ಆಯೋಜಿಸಿ ಮೊದಲು ಮಹಿಳೆಯರಲ್ಲಿ ಸಾಮಾನ್ಯವಾಗಿರುವ ಹಿಂಜರಿಕೆಯನ್ನು ಹೋಗಲಾಡಿಸುವ ಮೂಲಕ ಜನರೊಂದಿಗೆ ಮತ್ತು ಅಧಿಕಾರಿಗಳೊಂದಿಗೆ ಮುಕ್ತವಾಗಿ ಗ್ರಾಮ ಸಭೆಗಳಲ್ಲಿ ಚರ್ಚಿಸುವ ಮನೋಸ್ಥೈರ್ಯ ಮೂಡಿಸುವುದು ಹಾಗೂ ಸಭೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ, ಅಭಿವೃದ್ಧಿ ಕಾರ್ಯಗಳಲ್ಲಿ ಕಾರ್ಯಪ್ರವೃತ್ತರನ್ನಾಗಿಸುವ ಮಹದಾಸೆಯನ್ನು ಹೊಂದಿದೆ.

ಕರ್ನಾಟಕದಲ್ಲಿ ಮಹಿಳೆಯರಿಗಾಗಿ ವಿಶೇಷ ಗ್ರಾಮ ಸಭೆಗಳನ್ನು ಕಡ್ಡಾಯಗೊಳಿಸಿ ಜಾರಿಗೊಳಿಸಲು ಹೊರಡಿಸಿರುವ ದಿನಾಂಕ: 12.06.2009 ರ ಸುತ್ತೋಲೆ ಸಂಖ್ಯೆ:ಗ್ರಾ.ಅ.ಪ.364.ಗ್ರಾ.ಪೋ.ಅ/2014 ಹಾಗೂ 2016 ರಲ್ಲಿ ತಿದ್ದುಪಡಿಯಾದ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರಲ್ಲಿ ಪ್ರಕರಣ 3ಹೆಚ್ ನಲ್ಲಿ ಪ್ರಸ್ತಾಪವಾಗಿರುವಂತೆ ಮಹಿಳಾ ವಿಶೇಷ ಸಭೆಗಳಲ್ಲಿ ಒಂದಾದ ಮಹಿಳೆಯರ ಸಬಲೀಕರಣಕ್ಕಾಗಿ ಕಡೆಯ ಪಕ್ಷ ವರ್ಷಕ್ಕೆ ಒಂದು ಬಾರಿಯಾದರೂ ಮಹಿಳಾ ಗ್ರಾಮ ಸಭೆಯನ್ನು ಕರೆಯತಕ್ಕದ್ದು ಎಂದು ಸೂಚಿಸಿರುವುದರಿಂದ ಎಲ್ಲಾ ಗ್ರಾಮ ಪಂಚಾಯತಿಗಳಲ್ಲಿ ಮಹಿಳಾ ಗ್ರಾಮ ಸಭೆಗಳನ್ನು ಕಡ್ಡಾಯವಾಗಿ ಹಮ್ಮಿಕೊಳ್ಳಬೇಕಾಗಿರುವ ಹಿನ್ನಲೆಯಲ್ಲಿ, ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಇಲಾಖೆಯು ಗ್ರಾಮ ಪಂಚಾಯತಿ ಮಟ್ಟದಲ್ಲಿ ಗ್ರಾಮ ಪಂಚಾಯತಿಯ ಚುನಾಯಿತ ಮಹಿಳಾ ಸದಸ್ಯರು ಸ್ವಸಹಾಯ ಸಂಘದ ಸದಸ್ಯರು, ಎನ್.ಜಿ.ಓಗಳ (ಸರ್ಕಾರೇತರ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಮಹಿಳಾ ಕಾರ್ಯಕರ್ತರು) ಮತ್ತು ಗ್ರಾಮದ ಚುನಾಯಿತ ಮತದಾರರ ಪಟ್ಟಿಯಲ್ಲಿ ನೊಂದಾಯಿತ ಮಹಿಳೆಯರುರಗಳಿಗೆ ಮಹಿಳಾ ಗ್ರಾಮಸಬೆಯನ್ನು ಹಮ್ಮಿಕೊಳ್ಳುವುದರ ಮೂಲಕ ಮಹಿಳೆಯರ ಭಾಗವಹಿಸುವಿಕೆ ಮತ್ತು ಅಭಿವೃದ್ಧಿ ಕಾರ್ಯಕ್ರಮಗಳ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಒತ್ತು ನೀಡಿದೆ.

ಪ್ರಸ್ತುತ ಕರ್ನಾಟಕದ 6018 ಗ್ರಾಮ ಪಂಚಾಯ್ತಿಗಳಲ್ಲಿ 50% ಕ್ಕಿಂತ ಹೆಚ್ಚು ಚುನಾಯಿತ ಮಹಿಳಾ ಪ್ರತಿನಿಧಿಗಳು ಕಾರ್ಯನಿರತರಾಗಿರುತ್ತಾರೆ. ಮಹಿಳೆಯರಿಗೆ ಸಂಭಂದಪಟ್ಟ ವಿಷಯಗಳ ಸಲುವಾಗಿ ಕಡ್ಡಾಯ ಗ್ರಾಮ ಸಭೆಯ ಮುಂಚಿತವಾಗಿ ಮಹಿಳಾ ವಿಶೇಷ ಗ್ರಾಮ ಸಭೆಯನ್ನು ಹಮ್ಮಿಕೊಳ್ಳಬೇಕಾಗಿರುವುದನ್ನು ಅಧಿನಿಯಮವು ಸೂಚಿಸುತ್ತದೆ. ಮಹಿಳೆಯರಿಗೆ ನೇರವಾಗಿ ಸಂಬಂಧಪಟ್ಟ ವಿಷಯಗಳಾದ ನೀರಿನ ಲಭ್ಯತೆ, ಆರೋಗ್ಯ ಸೇವೆಗಳು, ಶಿಕ್ಷಣ ಮತ್ತು ಹದಿಹರೆಯದ ಹೆಣ್ಣು ಮಕ್ಕಳ ಸಮಸ್ಯೆಗಳು ಇತ್ಯಾದಿಗಳ ಬಗ್ಗೆ ಮಹಿಳೆಯರು ತಮ್ಮ ಅಭಿಪ್ರಾಯಮತ್ತು ಬೇಡಿಕೆಗಳನ್ನು

ಧ್ವನಿಮುದ್ರಿಸುವ ಅಗತ್ಯತೆ ಕಂಡುಬಂದಿರುತ್ತದೆ. ಮುಂದುವರೆದು, ಇತ್ತೀಚಿನ ದಿನಗಳಲ್ಲಿ ಗ್ರಾಮಪಂಚಾಯತಿಗಳಿಗೆ ಹೆಚ್ಚಿನ ಆಡಳಿತಾತ್ಮಕ ಮತ್ತು ಹಣಕಾಸಿನ ಅಧಿಕಾರವನ್ನು ನೀಡಲಾಗಿದ್ದರೂ ಬಹಳ ಮುಖ್ಯವಾಗಿ ಪಂಚಾಯತಿ ಮಟ್ಟದಲ್ಲಿ ಮಹಿಳಾ ಚುನಾಯಿತ ಪ್ರತಿನಿಧಿಗಳು ಇದ್ದಾಗ್ಯೂ, ನಿರ್ಧಾರ ತೆಗೆದುಕೊಳ್ಳುವಿಕೆಯಲ್ಲಿ ಅವರ ಪಾತ್ರ ತೀರ ವಿರಳವಾಗಿದೆ.

**ಮಹಿಳಾ ಗ್ರಾಮಸಭೆ ಆಯೋಜನೆಯ ಉದ್ದೇಶಗಳು**

- ಮಹಿಳೆಯರ ಸಬಲೀಕರಣಕ್ಕಾಗಿ ಯೋಜನೆಗಳನ್ನು ಮತ್ತು ಕಾರ್ಯಕ್ರಮಗಳನ್ನು ರೂಪಿಸುವುದಕ್ಕಾಗಿ ಪ್ರತ್ಯೇಕವಾಗಿ ಮಹಿಳಾ ಗ್ರಾಮ ಸಭೆಗಳನ್ನು ಗ್ರಾಮ ಪಂಚಾಯತಿಯ ಕಡ್ಡಾಯ ಗ್ರಾಮಸಭೆಗಳು ನಡೆಯುವುದಕ್ಕೂ ಮೊದಲು ಕಡೆಯ ಪಕ್ಷ ವರ್ಷಕ್ಕೆ ಒಂದು ಬಾರಿಯಾದರೂ ಮಹಿಳೆಯರುಗಳಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಚರ್ಚೆ ನಡೆಸಲು ಪ್ರತಿ ಗ್ರಾಮ ಪಂಚಾಯತಿಯಲ್ಲಿ ವಿಶೇಷ ಗ್ರಾಮಸಭೆಯನ್ನು ಆಯೋಜಿಸುವುದು ಒಂದು ಪ್ರಮುಖ ಉದ್ದೇಶವಾಗಿದೆ.
- ಮಹಿಳೆಯರು ಪ್ರತ್ಯೇಕವಾಗಿ ಸವಲತ್ತುಗಳನ್ನು ನಿಯಮಿತವಾಗಿ ಪಡೆದುಕೊಳ್ಳಲು ಹಾಗೂ ವಿವಿಧ ಅಭಿವೃದ್ಧಿ ಇಲಾಖೆಗಳ ಯೋಜನೆಗಳಲ್ಲಿ ಸೂಕ್ತ ಮಹಿಳಾ ಫಲಾನುಭವಿಗಳನ್ನು ಆಯ್ಕೆ ಮಾಡಲು ಅನುಕೂಲಮಾಡುವುದು. ಈ ಸಭೆಯ ಒಂದು ಪ್ರಮುಖ ಉದ್ದೇಶವಾಗಿದೆ.
- ಮಹಿಳೆಯರಿಗೆ ನೇರವಾಗಿ ಸಂಬಂಧಪಟ್ಟ ವಿಷಯಗಳಾದ ನೀರಿನ ಲಭ್ಯತೆ, ಆರೋಗ್ಯ ಸೇವೆಗಳು, ಶಿಕ್ಷಣ, ಹದಿಹರೆಯದ ಹೆಣ್ಣು ಮಕ್ಕಳ ಸಮಸ್ಯಗಳು, ಇತ್ಯಾದಿ ಗಳ ಬಗ್ಗೆ ಮಹಿಳೆಯರು ತಮ್ಮ ಅಭಿಪ್ರಾಯಗಳನ್ನು ಮತ್ತು ಬೇಡಿಕೆಗಳನ್ನು ವ್ಯಕ್ತಪಡಿಸಲು ವೇದಿಕೆ ಸೃಷ್ಟಿಸುವುದು ಮುಖ್ಯ ಉದ್ದೇಶವಾಗಿರುತ್ತದೆ.
- ಮಹಿಳೆಯರ ರಾಜಕೀಯ ನಾಯಕತ್ವ, ಲಿಂಗ ಸಮಾನತೆ, ಮಹಿಳಾ ಚುನಾಯಿತ ಪ್ರತಿನಿಧಿಗಳ ಸಾಮರ್ಥ ಹೆಚ್ಚಿಸುವ ಹಾಗೂ ವಿವಿಧ ಯೋಜನೆಗಳಲ್ಲಿ ಅವರುಗಳನ್ನು ತೊಡಗಿಸಿಕೊಳ್ಳುವ ಸಲುವಾಗಿ ಮಹಿಳಾ ಚುನಾಯಿತ ಪ್ರತಿನಿಧಿಗಳಿಗೆ ಸೂಕ್ತ ತಿಳುವಳಿಕೆಯ ಅವಶ್ಯಕತೆ ಇರುತ್ತದೆ. ಆದ್ದರಿಂದ ಗ್ರಾಮ ಸಭೆಯ ಮಾದರಿಯಲ್ಲಿ ಮಹಿಳೆಯರಿಗಾಗಿಯೇ ವಿಶೇಷ ಮಹಿಳಾ ಗ್ರಾಮ ಸಭೆಗಳನ್ನು ಆಯೋಜಿಸಿ ಪ್ರೋತ್ಸಾಹಿಸುವ ಉದ್ದೇಶವಾಗಿರುತ್ತದೆ.
- ಮಹಿಳಾ ಗ್ರಾಮಸಭೆಯಲ್ಲಿ ಚರ್ಚಿಸಿ ತೆಗೆದುಕೊಂಡ ತೀರ್ಮಾನಗಳು ಹಾಗೂ ಯೋಜನೆಗಳನ್ನು ನಮ್ಮ ಗ್ರಾಮ ನಮ್ಮ ಯೋಜನೆಯಡಿ ಅಳವಡಿಸಿ ಯೋಜನೆ ತಯಾರಿಸುವುದರಿಂದ ಗ್ರಾಮದ ಸಮಗ್ರ ಅಭಿವೃದ್ಧಿ ಮತ್ತು ಮಹಿಳಾ ಸಬಲೀಕರಣಕ್ಕೆ ಒತ್ತು ನೀಡಲು ಸಾಧ್ಯವಾಗುತ್ತದೆ.

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರಪ್ರಕರಣ (3 ಹೆಚ್) ರಲ್ಲಿ ಪ್ರಸ್ಥಾಪಿಸಿರುವ "ವಿಶೇಷ ಸಭೆ" ಗಳಲ್ಲಿ ಮಹಿಳೆಯರ ಸಬಲೀಕರಣಕ್ಕಾಗಿ ಪ್ರತ್ಯೇಕವಾಗಿ ಮಹಿಳಾ ವಿಶೇಷ ಗ್ರಾಮ ಸಭೆಯನ್ನು ಆಯೋಜಿಸಲು ಅವಕಾಶಕಲ್ಪಿಸಿರುತ್ತದ.. ಈ ಸಬೆಯಲ್ಲಿ ವಿಶೇಷವಾಗಿ ಮಹಿಳೆಯರಿಗೆ ಸಂಬಂದಿಸಿದ ವಿಷಯಗಳ ಬಗ್ಗೆ ಚರ್ಚಿಸಿ ಮಹಿಳಾ ಚುನಾಯಿತ ಪ್ರತಿನಿಧಿಗಳ ನಾಯಕತ್ವದಲ್ಲಿ ತೀರ್ಮಾನಗಳನ್ನು ಕೈಗೊಳ್ಳುವ ಮೂಲಕ ಪಂಚಾಯತಿ ಮಟ್ಟದಲ್ಲಿ ಮಹಿಳೆಯರಲ್ಲಿ ನಿರ್ಣಯಗಳನ್ನು ಕೈಗೊಳ್ಳಲು ಅವಕಾಶವನ್ನು ಕಲ್ಪಿಸಲಾಗಿರುತ್ತದೆ.

**ಗ್ರಾಮಪಂಚಾಯತಿ ವ್ಯಾಪ್ತಿಯಲ್ಲಿ ಮಹಿಳಾ ಗ್ರಾಮಸಭೆಗಳನ್ನು ಆಯೋಜಿಸುವಾಗ ಗಮನಿಸಬೇಕಾದ ಮುಖ್ಯವಾದ ಅಂಶಗಳು ಈ ಕೆಳಕಂಡಂತಿದೆ.**

- ಶೇಕಡ 1/3 ರಷ್ಟು ಮತದಾರರು ಕೋರಿಕೆ ಸಲ್ಲಿಸಿದರೆ ವಿಶೇಷ ಗ್ರಾಮ ಸಭೆಯನ್ನು ಕರೆಯುವುದು.
- ಲಿಖಿತ ಮನವಿಯಲ್ಲಿ ಚರ್ಚಿಸುವಂತಹ ವಿಷಯವನ್ನು ನಿರ್ದಿಷ್ಟ ಪಡಿಸುವುದು.
- ಮೂರು ತಿಂಗಳ ಅವಧಿಯೊಳಗೆ 2 ವಿಶೇಷ ಗ್ರಾಮ ಸಭೆಯನ್ನು ಕರೆಯುವಂತಿಲ್ಲ.
- ಮಹಿಳೆಯರಿಗಾಗಿ ವಿಷೇಶ ಗ್ರಾಮ ಸಭೆ ಆಯೋಜಿಸುವುದು.

**ಮಹಿಳಾ ಗ್ರಾಮಸಭೆಯ ಮಹತ್ವ**

ಕರ್ನಾಟಕದಲ್ಲಿ ಮಹಿಳೆಯರಿಗಾಗಿ ವಿಶೇಷ ಗ್ರಾಮ ಸಭೆಗಳನ್ನು ಕಡ್ಡಾಯಗೊಳಿಸಿ ಹೊರಡಿಸಿರುವ ದಿನಾಂಕ 12.06.2009 ರ ಸುತ್ತೋಲೆ ಸಂಖ್ಯೆ: ಗ್ರಾಅಪ 364 ಗ್ರಾ.ಆ.ಪ 2014 ಹಾಗೂ 2016 ರಲ್ಲಿ ತಿದ್ದುಪಡಿಯಾದ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರಲ್ಲಿ ಪ್ರಕರಣ 3ಹೆಚ್ ನಲ್ಲಿ ಪ್ರಸ್ತಾಪವಾಗಿರುವ ಗ್ರಾಮ ಸಭಾದ ವಿಶೇಷ ಸಭೆಗಳಲ್ಲಿ ಒಂದಾದ ಮಹಿಳೆಯರ ಸಬಲೀಕರಣಕ್ಕಾಗಿ ಪ್ರತ್ಯೇಕವಾಗಿ ಮಹಿಳಾ ವಿಶೇಷ ಸಭೆಯನ್ನು ಗ್ರಾಮ ಪಂಚಾಯತ್ ಸಭೆ ನಡೆಯುವುದಕ್ಕೂ ಮೊದಲು, ಕಡೆಯ ಪಕ್ಷ ವರ್ಷಕ್ಕೆ ಒಂದು ಬಾರಿಯಾದರೂ ಕರೆಯತಕ್ಕದ್ದು ಎಂದು ಸೂಚಿಸಿರುವುದರಿಂದ ಎಲ್ಲಾ ಗ್ರಾಮ ಪಂಚಾಯ್ತಿಗಳಲ್ಲಿ ಮಹಿಳಾ ಗ್ರಾಮ ಸಭೆಗಳನ್ನು ಕಡ್ಡಾಯವಾಗಿ ಹಮ್ಮಿಕೊಳ್ಳಬೇಕಾಗಿರುತ್ತದೆ.

ದಿನಾಂಕ 19.11.2016 ರ ಸುತ್ತೋಲೆ ಸಂಖ್ಯೆ: ಗ್ರಾಅಪ 939 ಗ್ರಾಪಂಅ 2016(2) ಪ್ರಕಾರ ವಿಶೇಷ ಗ್ರಾಮ ಸಭೆಗಳಲ್ಲಿ ಒಂದಾದ ಮಹಿಳಾ ಗ್ರಾಮ ಸಭೆಯನ್ನು ನಡೆಸಲು ಅನುಸರಿಸಬೇಕಾದ ವಿಧಾನವನ್ನು ಸೂಚಿಸಲಾಗಿದೆ.

ಸದರಿ ಸುತ್ತೋಲೆಯ ಅನುಬಂಧದಲ್ಲಿ ವಿವರಿಸಿರುವಂತೆ ಪೌಷ್ಟಿಕತೆಯ ಬಗ್ಗೆ, ಮಹಿಳೆಯರ ಆರೋಗ್ಯ ಸುಧಾರಣೆ, ಮಹಿಳೆ ಮತ್ತು ಕಾನೂನು ವಿಷಯಗಳ ಬಗ್ಗೆ ಅರಿವು ಮೂಡಿಸುವುದು, ಕೌಟುಂಬಿಕ ದೌರ್ಜನ್ಯ ತಡೆಗಟ್ಟುವುದು, ಮಹಿಳೆಯರ ಆರ್ಥಿಕ, ಸಾಮಾಜಿಕ, ರಾಜಕೀಯ ಸಬಲೀಕರಣ, ಮೂಲಭೂತ ಸೌಕರ್ಯ, ಮಹಿಳೆಯರ ಶೈಕ್ಷಣಿಕ ಮಟ್ಟವನ್ನು ಹೆಚ್ಚಿಸುವಂತಹ ವಿಷಯಗಳ ಬಗ್ಗೆ ಮುಕ್ತವಾಗಿ ಚರ್ಚೆ ಮಾಡಲು ಮೂಡಿ ಬರುವ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವುದು, ಅಭಿವೃದ್ಧಿ ಇಲಾಖೆಗಳಲ್ಲಿ ಲಭ್ಯವಿರುವ ಯೋಜನೆಗಳ ಲಾಭವನ್ನು ಸೂಕ್ತ ಫಲಾನುಭವಿಗಳಿಗೆ ದೊರಕಿಸುವುದು.

ಮಹಿಳೆಯರು ಪ್ರತ್ಯೇಕವಾಗಿ ಸವಲತ್ತುಗಳನ್ನು ನಿಯಮಿತವಾಗಿ ಪಡೆದುಕೊಳ್ಳಲು ಹಾಗೂ ವಿವಿಧ ಅಭಿವೃದ್ಧಿ ಇಲಾಖೆಗಳ ಯೋಜನೆಗಳಲ್ಲಿ ಸೂಕ್ತ ಮಹಿಳಾ ಫಲಾನುಭವಿಗಳನ್ನು ಆಯ್ಕೆ ಮಾಡಲು ಅನುಕೂಲವಾಗುವುದು.

ಕಾಯಿದೆ ಪ್ರಕಾರವಾಗಿ ವಾರ್ಡ್ ಹಾಗೂ ಗ್ರಾಮ ಸಭೆಗಳಲ್ಲಿ ಮಹಿಳೆಯರು ಕೂಡ ಸದಸ್ಯರಾಗಿರುತ್ತಾರೆ, ಆದರೆ ನಮ್ಮೆಲ್ಲರಿಗೂ ತಿಳಿದಿರುವಂತೆ ಗ್ರಾಮೀಣ ಮಹಿಳೆಯರ ಭಾಗವಹಿಸುವಿಕೆ ಅತೀ ಕಡಿಮೆ ಇರುತ್ತದೆ. ಇದಕ್ಕೆ ಹಲವಾರು ಕಾರಣವಿದ್ದು, ಪುರುಷ ಪ್ರಧಾನ ಸಮಾಜ, ಸಾಂಸ್ಕೃತಿಕ ಹಿನ್ನಲೆ ಮತ್ತು ಸಾರ್ವಜನಿಕ ಕ್ಷೇತ್ರದಲ್ಲಿ ಮಹಿಳೆಯರ ಹಿಂಜರಿಯುವಿಕೆ ಪ್ರಮುಖವಾಗಿದೆ. ಮರ್ಯಾದೆ ನೆಪದಲ್ಲಿ ಇಂದಿಗೂ ಗ್ರಾಮೀಣ ಪ್ರದೇಶದಲ್ಲಿ ಮಹಿಳೆಯರು ಹಿರಿಯರ ಸಮ್ಮುಖದಲ್ಲಿ ಬರುವುದಾಗಲಿ ಅಥವಾ

ಅವರೊಂದಿಗೆ ಕುಳಿತು ಸಮಾಲೋಚಿಸುವುದನ್ನು ಸಮಾಜವು ಹಿರಿಯರ ಅವಮಾನವೆಂದು ಭಾವಿಸುತ್ತದೆ. ಮಹಿಳೆಯರು ವಾರ್ಡ್ ಹಾಗೂ ಗ್ರಾಮ ಸಭೆಯ ಸದಸ್ಯರಾಗಿದ್ದರೂ ಹಿಂಜರಿಕೆ, ಮುಜುಗರ ಹಾಗೂ ಸಮಾಜದ ಈ ಭಾವನೆಯಿಂದಾಗಿ ಸಭೆಗಳಲ್ಲಿ ತಾನು ಮುಕ್ತವಾಗಿ ಪಾಲ್ಗೊಳ್ಳದೆ ಅವರ ಅಭಿಪ್ರಾಯಗಳನ್ನು ತನ್ನ ಪತಿ ಅಥವಾ ಕುಟುಂಬದ ಇತರೆ ಸದಸ್ಯರ ಮೂಲಕ ತಿಳಿಸುವರು. ಇದರಿಂದ ಮಹಿಳೆಯರ ಅಭಿಪ್ರಾಯಗಳಿಗೆ ಹಾಗೂ ನಿರ್ಣಯಗಳಿಗೆ ಸೂಕ್ತ ವೇದಿಕೆ ಮತ್ತು ಮನ್ನಣೆ ಸಿಗುವುದಿಲ್ಲ.

ಈ ನಿಟ್ಟಿನಲ್ಲಿ ವಿಶ್ವದ 193 ದೇಶಗಳು ಜಂಟಿಯಾಗಿ ನಿಗದಿ ಪಡಿಸಿರುವ 17 ಸುಸ್ಥಿರ ಅಭಿವೃದ್ಧಿ ಗುರಿ(ಖಆಉ) ಗಳಲ್ಲಿ 5ನೇ ಪ್ರಮುಖ ಗುರಿಯಾಗಿರುವ – ಲಿಂಗ ಸಮಾನತೆ ಸಾಧಿಸುವುದು ಹಾಗೂ ಮಹಿಳೆಯರನ್ನು ಮತ್ತು ಹೆಣ್ಣುಮಕ್ಕಳನ್ನು ಸಶಕ್ತಗೊಳಿಸುವುದು. ಈ ಗುರಿಯನ್ನು ಸಾಧಿಸವ ನಿಟ್ಟಿನಲ್ಲಿ ಮಹಿಳಾ ಗ್ರಾಮ ಸಭೆಗಳು ಪ್ರಮುಖ ಪಾತ್ರವಹಿಸುತ್ತದೆ.

ಇದರ ಜೊತೆಗೆ ಮಾನವ ಅಭಿವೃದ್ಧಿ ಸೂಚ್ಯಂಕ ವರದಿ (ಊಆಖ) ಯಲ್ಲಿ ಭಾರತದ ಸ್ಥಾನವು ವರ್ಷದಿಂದ ವರ್ಷಕ್ಕೆ ಕ್ಷೀಣಿಸುತ್ತಿದೆ. ಉದಾಹರಣೆಗೆ 2015 ರಲ್ಲಿ 188 ದೇಶಗಳ ಪೈಕಿ 130ನೇ ಸ್ಥಾನಗಳಿಸಿದ ನಮ್ಮ ದೇಶವು 2016 ರ ವರದಿಯ ಪ್ರಕಾರ 131ಕ್ಕೆ ಸ್ಥಾನಕ್ಕೆ ಕುಸಿದಿದೆ. ಇದಕ್ಕೆ ಮೂಲ ಕಾರಣಗಳಲ್ಲಿ ಒಂದಾಗಿರುವ ಕಾರಣ ನಮ್ಮ ದೇಶದ ಒಟ್ಟು ಜನಸಂಖ್ಯೆಯಲ್ಲಿ ಸುಮಾರು ಶೇ. 50%ರಷ್ಟು ಮಹಿಳೆಯರಿದ್ದು, ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಹಿಂದುಳಿದಿರುತ್ತಾರೆ. ಹಾಗಾಗಿ ಅಭಿವೃದ್ಧಿ ಪ್ರಕ್ರಿಯಲ್ಲಿ ಮಹಿಳೆಯರ ಭಾಗವಹಿಸುವಿಕೆ ಅತಂತ್ಯ ಪ್ರಮುಖವಾಗಿದ್ದು, ಇದನ್ನುಸಾಧಿಸುವಲ್ಲಿ ಮಹಿಳಾ ಗ್ರಾಮ ಸಭೆಗಳು ಒಂದು ಉತ್ತಮ ವೇದಿಕೆಯಾಗಿ ಪರಿಣಾಮ ಬೀರುವವು

**ಮಹಿಳಾ ಗ್ರಾಮ ಸಭೆಗಳಲ್ಲಿ ಚರ್ಚಿಸಬಹುದಾದ ವಿಷಯಗಳು**

- ಹಿಂದಿನ ಮಹಿಳಾ ಗ್ರಾಮ ಸಭೆಯ ನಡವಳಿಯ ಬಗ್ಗೆ ಕೈಗೊಂಡ ಕ್ರಮ
- ಗ್ರಾಮದ ಮಹಿಳೆಯರು ಮತ್ತು ಹದಿಹರೆಯದ ಹೆಣ್ಣು ಮಕ್ಕಳು ಎದುರಿಸುತ್ತಿರುವ ಸಮಸ್ಯೆಗಳು
- ಮಹಿಳೆಯರು ಮತ್ತು ಹದಿಹರೆಯದ ಹೆಣ್ಣು ಮಕ್ಕಳಿಗೆ ಲಭ್ಯವಿರುವ ಅನುಕೂಲಗಳು ಹಾಗೂ ಸೌಲಭ್ಯಗಳ ಕುರಿತು
- ಮಹಿಳೆಯರ ಮೇಲೆ ನಡೆಯುತ್ತಿರುವ ವಿವಿಧ ರೀತಿಯ ದೌರ್ಜನ್ಯಗಳ ಕುರಿತು
- ಮಹಿಳೆಯರ ಸಬಲೀಕರಣಕ್ಕಾಗಿರುವ ಸರ್ಕಾರದ ವಿವಿಧ ಯೋಜನೆ ಹಾಗೂ ಕಾರ್ಯಕ್ರಮಗಳ ಬಗ್ಗೆ
- ಗ್ರಾಮದಲ್ಲಿ ಶಾಲೆ ಬಿಟ್ಟ ಹೆಣ್ಣು ಮಕ್ಕಳ ಶಿಕ್ಷಣ ಕುರಿತು ಚರ್ಚೆ
- ಹದಿಹರೆಯದ ಹೆಣ್ಣು ಮಕ್ಕಳು, ಗರ್ಭಿಣಿ ಸ್ತ್ರೀಯರು ಹಾಗೂ ಬಾಣಂತಿಯರ ಆರೋಗ್ಯ ಕುರಿತು
- ಸ್ವ–ಸಹಾಯ ಸಂಘಗಳು ಹಾಗೂ ಸ್ತ್ರೀಶಕ್ತಿ ಸಂಘಗಳು ಕೈಗೆತ್ತಿಕೊಳ್ಳಬಹುದಾದ ಆದಾಯ ಚಟುವಟಿಕೆಗಳ ಕುರಿತು
- ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿನ ಕುಡಿಯುವ ನೀರು, ನೈರ್ಮಲ್ಯ, ಬೀದಿ ದೀಪ ಹಾಗೂ ರಸ್ತೆಗಳ ವ್ಯವಸ್ಥೆಯ ಬಗ್ಗೆ.
- ಮಹಿಳೆಯರು ಮತ್ತು ಮಕ್ಕಳ ಅಪೌಷ್ಠಿಕತೆ ಹಾಗೂ ರಕ್ತಹೀನತೆ ಕುರಿತು
- ಲಿಂಗ ತಾರತಮ್ಯ ಹೋಗಲಾಡಿಸುವ ಕುರಿತು
- ಬಾಲ್ಯ ವಿವಾಹ, ಬಾಲ ಕಾರ್ಮಿಕರು ಹಾಗೂ ಮಹಿಳಾ ಮತ್ತು ಮಕ್ಕಳ ಸಾಗಾಣಿಕೆ ಕುರಿತು
- ಮಹಿಳೆಯರಿಗೆ ಸಂಬಂಧ ಪಟ್ಟ ಕಾನೂನುಗಳ ಮಾಹಿತಿ
- ಭಾರತ ಸರ್ಕಾರದ ಪಂಚಾಯತ್ ರಾಜ್ ಮಂತ್ರಾಲಯದ ಉಲ್ಲೇಖದಲ್ಲಿ ವಿವರಿಸಿರುವಂತೆ ಎಲ್ಲಾ ಗ್ರಾಮ ಪಂಚಾಯತಿಗಳಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ಪೋಷಣ್ ಪಕ್ವಾಡಗಳನ್ನು ಅಭಿಯಾನವನ್ನು ಆಯೋಜಿಸುವಂತೆ ಸೂಚಿಸಿದ್ದು, ಈ ಅಭಿಯಾನದಡಿ ವಿಶೇಷ ಗ್ರಾಮ ಸಭೆಗಳನ್ನು ಆಯೋಜಿಸಲು ಸೂಚಿಸಿದ್ದು ಗ್ರಾಮೀಣಾ ಪ್ರದೇಶದಲ್ಲಿ ಗರ್ಬಿಣಿ ಮಹಿಳೆಯರನ್ನು ಗುರುತಿಸುವುದು. ಗ್ರಾಮೀಣ ಪ್ರದೇಶಗಳಲ್ಲಿನ ವಿವಿಧ ಆಹಾರ ಪದ್ದತಿಯಡಿಯಲ್ಲಿ ಸ್ಥಳೀಯವಾಗಿ ಲಭ್ಯವಿರುವ ಪೌಷ್ಠಿಕ ಆಹಾರಗಳನ್ನು ಗುರುತಿಸುವುದು, ಅಂಗನವಾಡಿ ಕೇಂದ್ರಗಳಲ್ಲಿ ವಿವಿಧ ಫಲಾನುಭವಿಗಳಿಗೆ ವಿತರಿಸಲು ಲಬ್ಯವಿರುವ ಪೂರಕ ಪೌಷ್ಠಿಕ ಆಹಾರ ಇತ್ಯಾದಿ ವಿಷಯಗಳ ಬಗ್ಗೆ ಪೋಷಣ್ ಪಕ್ವಾಡ ಅಭಿಯಾನದಡಿಯಲ್ಲಿ ಆಯೋಜಿಸುವ ವಿಶೇಷ ಗ್ರಾಮ ಸಭೆಗಳಲ್ಲಿ ಚರ್ಚಿಸುವಂತೆ ಸೂಚಿಸಿದೆ

**ಮಹಿಳೆಯರಿಗಾಗಿ ವಿಶೇಷ ಗ್ರಾಮ ಸಭೆಗಳನ್ನು ಕಡ್ಡಾಯವಾಗಿ ನಡೆಸುವ ಬಗ್ಗೆ ಕರ್ನಾಟಕ ಸರ್ಕಾರ ಆದೇಶ ಸಂಖ್ಯೆ ಗ್ರಾಅಪ 364 ಗ್ರಾ.ಆ.ಪ 2014 ದಿನಾಂಕ: 12.06.2014 ರಲ್ಲಿ ಈ ಕೆಳಕಂಡ ಅಂಶಗಳ ಬಗ್ಗೆ ಚರ್ಚಿಸುವುದು.**

**A– ಪೌಷ್ಠಿಕತೆಯ ಬಗ್ಗೆ**

1. **ಮಹಿಳೆಯರ ಪೌಷ್ಠಿಕತೆಯ ಬಗ್ಗೆ ಚರ್ಚಿಸುವುದು ಗ್ರಾಮೀಣ ಮಹಿಳೆಯರು ಮತ್ತು ಮಕ್ಕಳ್ಲಿ ಅಪೌಷ್ಠಿಕತೆ ಕಡಿಮೆ ಮಾಡುವುದು**
   ಅಂಗನವಾಡಿ ಹಾಗೂ ಶಾಲೆಗಳಲ್ಲಿ ಲಭ್ಯವಿರುವ ಪೂರಕ ಪೌಷ್ಠಿಕ ಆಹಾರದ ಸೇವೆಗಳನ್ನು ಸರ್ಮಪಕವಾಗಿ ಬಳಸಿಕೊಳ್ಳುವುದುರ ಜೊತೆಗೆ ಸ್ಥಳೀಯವಾಗಿ ದೊರೆಯುವ ಆಹಾರ ಪದಾರ್ಥಗಳಲ್ಲಿರುವ ಪೌಷ್ಠಿಕಾಂಶಗಳ ಕುರಿತು ಮನವರಿಕೆ ಮಾಡಿಕೊಡುವುದು ಹಾಗೂ ಪ್ರಮುಖ ಪೌಷ್ಠಿಕಾಂಶಗಳ ಕೊರತೆಯಿಂದ ಎದುರಿಸಬೇಕಾದ ಆರೋಗ್ಯ ಸಮಸ್ಯೆಗಳು ಮತ್ತು ರಕ್ತಹೀನತೆಯಂತಹ ಸಮಸ್ಯೆಗಳ ಬಗ್ಗೆ ಕಿಶೋರಿಯರಿಗೆ ಹಾಗೂ ಮಹಿಳೆಯರಿಗೆ ಅರಿವು ಮೂಡಿಸಬೇಕಾಗಿರುತ್ತದೆ.

2. **ಮಹಿಳೆಯರ ಆರೋಗ್ಯ ಸುಧಾರಣ**
   ಮಹಿಳೆಯರ ಮತ್ತು ಮಕ್ಕಳ ಆರೋಗ್ಯ ಸೂಚ್ಯಂಕಗಳಾದ ತಾಯಂದಿರ ಮರಣದರ ಶಿಶು ಮರಣದರವನ್ನು ಈ ಕೆಳಕಂಡ ಅಂಶಗಳಿಗೆ ಒತ್ತು ನೀಡುವುದರಿಂದ ಕಡಿಮೆಗೊಳಿಸಬಹುದಾಗಿರುತ್ತದೆ. ಸಾಂಸ್ಥಿಕ ಹೆರಿಗೆಗಳ ಪ್ರಮಾಣದಲ್ಲಿ ಹೆಚ್ಚಳ ಮಹಿಳೆಯರಲ್ಲಿ ರಕ್ತಹೀನತೆಯ ಪ್ರಮಾಣ ತಗ್ಗಿಸುವುದು, ಗರ್ಭಿಣಿ ಹಾಗೂ ಬಾಣಂತಿಯರ ಆರೋಗ್ಯಕ್ಕೆ ಸಂಬಂಧಿಸಿದಂತೆ ಲಭ್ಯವಿರುವ ಎಲ್ಲಾ ಸೇವೆಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳುವುದು.

3. **ಮಹಿಳೆ ಮತ್ತು ಕಾನೂನು ವಿಷಯಗಳ ಬಗ್ಗೆ ಅರಿವು ಮೂಡಿಸುವುದು**
   ಎಲ್ಲಾ ಸಮಸ್ಯೆಗಳಿಂದ ಮಹಿಳೆಯರನ್ನು ಮುಕ್ತಿಗೊಳಿಸುವುದಕ್ಕಾಗಿಯೇ ಸರ್ಕಾರವು ಹಲವಾರು ಕಾನೂನುಗಳನ್ನು ಜಾರಿಗೆ ತಂದಿದೆ. ಅವರಿಗಾಗಿ ಕಾನೂನಿನಲ್ಲಿ ಸವಲತ್ತನ್ನು ನೀಡಿದೆ. ಸ್ತ್ರೀ ಪುರುಷರಿಗೆ ಸಮಾನ ಕೆಲಸಕ್ಕೆ

ಸಮಾನ ವೇತನ ನೀಡುವುದು, ವರದಕ್ಷಿಣೆ ನಿಷೇಧ ಅಧಿನಿಯಮ 1961 ಮಹಿಳೆಯರಿಗಾಗಿ ಇರುವ ಕನಿಷ್ಠ ಮಜೂರಿ ಪಡೆಯುವ ಹಕ್ಕು ಬಾಲ್ಯ ವಿವಾಹ ಕಾಯ್ದೆ 2006, ಹಿಂದೂ ವಿವಾಹ ಕಾಯ್ದೆ ಮುಂತಾದವುಗಳಲ್ಲಿ ಮಹಿಳೆಯರಿಗೆ ಇರುವ ಪರಿಹಾರದ ಬಗ್ಗೆ ಅರಿವು ಮೂಡಿಸುವುದು.

4. **ಕೌಟುಂಬಿಕ ದೌರ್ಜನ್ಯ ತಡೆಗಟ್ಟುವುದು**

ಸಮಾಜದಲ್ಲಿ ಕೌಟುಂಬಿಕ ದೌರ್ಜನ್ಯ ತುಂಬ ಅಪಾಯಕರ ಹಾಗೂ ದ್ರೋಹದ ಮಾದರಿಯ ಹಿಂಸೆಯಾಗಿದೆ. ಕೌಟುಂಬಿಕ ದೌರ್ಜನ್ಯವನ್ನು ಕಾಯ್ದೆಯ ವ್ಯಾಪ್ತಿಗೆ ಒಳಪಡಿಸಿರುವುದರಿಂದ ಇದು ದೌರ್ಜನ್ಯಕ್ಕೆ ಒಳಗಾದ ಮಹಿಳೆಯರಿಗೆ ತುರ್ತಾಗಿ ಪರಿಹಾರ ಒದಗಿಸುವುದಲ್ಲದೇ ಇವರ ಪರವಾಗಿ ಕೆಲಸ ಮಾಡುವ ಸ್ವಯಂ ಸೇವಾ ಸಂಸ್ಥೆಗಳಿಗೂ ಈ ಕಾಯ್ದೆ ರಕ್ಷಣೆ ನೀಡುತ್ತದೆ. ಮಹಿಳೆಯರ ಅಸಹಾಯಕತೆಯನ್ನು ದುರುಪಯೋಗ ಪಡಿಸಿಕೊಳ್ಳುವ ಪ್ರವೃತ್ತಿಗೆ ಈ ಮಸೂದೆ ಕಡಿವಾಣ ಹಾಕುತ್ತದೆ.

5. **ಮಹಿಳೆಯರ ಸಬಲೀಕರಣ**

a. **ಆರ್ಥಿಕ ಸಬಲೀಕರಣ**

ಮಹಿಳಾ ಉದ್ದೇಶಿತ ಆಯವ್ಯಯವು ಲಿಂಗತ್ವ ಸಮಾನತೆ ಮತ್ತು ಮಹಿಳೆಯರ ಸಬಲೀಕರಣವನ್ನು ಸಾಧಿಸುವ ನಿಟ್ಟಿನಲ್ಲಿ ಪ್ರಮುಖ ಹೆಜ್ಜೆಯಾಗಿರುತ್ತದೆ. ಆಯವ್ಯಯದ ಹಣಕಾಸು ನಿಗಧಿಯಲ್ಲಿ ಮಾತ್ರವಲ್ಲದೇ ವಿವಿಧ ಯೋಜನೆಗಳ ಮತ್ತು ಕಾರ್ಯಕ್ರಮಗಳಲ್ಲಿ ವೆಚ್ಚ ಮಾಡಲಾಗುವ ಸಂಪನ್ಮೂಲಗಳಲ್ಲಿ ಮಹಿಳೆಯರು ಮತ್ತು ಪುರುಷರಿಗೆಸಲ್ಲಬೇಕಾದ ಪಾಲು ಖಾತರಿ ಪಡಿಸಲು ಲಿಂಗಾಧಾರಿತ ಆಯವ್ಯಯವನ್ನು ಅನುಸರಿಸಲಾಗುತ್ತಿದೆ. ಸಂಪೂರ್ಣವಾಗಿ ಶೇ.100 ರಷ್ಟು ಅನುದಾನ ಮಹಿಳೆಯರಿಗಾಗಿ ಮಿಸಲಾಗಿರುವ ಯೋಜನೆಗಳನ್ನು "ಎ" ವರ್ಗದ ಯೋಜನೆಗಳೆಂದು, ಕನಿಷ್ಠ ಶೇ.30 ರಷ್ಟು ಅನುದಾನ ಮೀಸಲಾಗಿರುವ ಯೋಜನೆಗಳನ್ನು "ಬಿ" ವರ್ಗದ ಯೋಜನೆಗಳೆಂದು ವರ್ಗೀಕರಿಸಲಾಗಿದೆ.

b. **ಮಹಿಳೆಯರ ಸಾಮಾಜಿಕ ಸಬಲೀಕರಣ, ಮೂಲಭೂತ ಸೌಕರ್ಯಗಳನ್ನು ಒದಗಿಸುವುದು**

ಪ್ರತಿ ಗ್ರಾಮ ಸಭೆಯಲ್ಲಿಯೂ ಮಹಿಳೆಯರು ಹಾಗೂ ಹೆಣ್ಣು ಮಕ್ಕಳ ಪರಿಸ್ಥಿತಿಯ ಕುರಿತು ಕಡ್ಡಾಯವಾದ ಕಾರ್ಯಸೂಚಿ ಇರುವಂತೆ ನೋಡಿಕೊಳ್ಳಬೇಕು, ಅಲ್ಲದೇ ಮಹಿಳೆಯರ ಸ್ಥಿತಿಗತಿಗಳನ್ನು ಉತ್ತಮಪಡಿಸುವಂತ ಸೂಕ್ತ ನಿರ್ಣಯ ಕೈಗೊಳ್ಳಬೇಕು. ಮಹಿಳೆಯರ ಬೆಳವಣಿಗೆಗೆ ಅಡ್ಡಿಯಾಗುವ ಸಾಮಾಜಿಕ, ಸಂಸ್ಕೃತಿಕ ಅಡೆ ತಡೆಗಳನ್ನು ಹೋಗಲಾಡಿಸಲು ಅಭಿವೃದ್ಧಿ ಇರುವ ವಿವಿಧ ಅವಕಾಶಗಳಲ್ಲಿ ಲಿಂಗತ್ವ ಆಧಾರಿತ ಆಯವ್ಯಯ ಹಾಗೂ ಅನುದಾನ ಮೀಸಲಿಟ್ಟಿರುವುದನ್ನು ಖಾತ್ರಿಪಡಿಸಿಕೊಳ್ಳಬೇಕು. ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ನಡೆಯುವ ವಿವಿಧ ಅಭಿವೃದ್ಧಿ ಕಾಮಗಾರಿ/ಕಾರ್ಯಕ್ರಮಗಳಿಗೆ (ಸಂಪೂರ್ಣ ಸ್ವಚ್ಛತಾ ಆಂದೋಲನ, ಸಾಕ್ಷರತೆ, ಕುಡಿಯುವ ನೀರಿನ ಯೋಜನೆ, ಸ್ವಯಂ ಸೇವಾ ಕಾರ್ಮಿಕರು, ಹಣ ಮತ್ತು ವಸತಿ ರೂಪದಲ್ಲಿ ವಂತಿಕೆ) ಒದಗಿಸಬೇಕು.

c. **ರಾಜಕೀಯ ಸಬಲೀಕರಣ**

ಭಾರತದ ಸಂವಿಧಾನವು ಪರಿಚ್ಛೇದ 14, 15, 23, 29, 30, 42, 45 ರಲ್ಲಿ ಮಹಿಳಾ ಸಮಾನತೆಯನ್ನು ಖಾತ್ರಿಪಡಿಸಿದ್ದರೂ, ಭಾರತೀಯ ಮಹಿಳೆಯರು ಇಂದಿಗೂ ಎಲ್ಲಾ ಕ್ಷೇತ್ರಗಳಲ್ಲಿ ಪುರುಷರಷ್ಟು ಸಮಾನತೆಯನ್ನು ಹೊಂದಲು ಸಾಧ್ಯವಾಗಿರುವುದಿಲ್ಲ. ಶಿಕ್ಷಣ ಹಾಗೂ ಉದ್ಯೋಗ ಕ್ಷೇತ್ರದಲ್ಲಿ ಸಾಕಷ್ಟು ಪ್ರಗತಿ ಸಾಧಿಸಿದ್ದರೂ ರಾಜಕೀಯ ಕ್ಷೇತ್ರದಲ್ಲಿ ಇನ್ನೂ ಸಕ್ರಿಯವಾಗಿ ಪಾಲ್ಗೊಳ್ಳುವಂತಾಗಬೇಕು. ಈ ರೀತಿಯ ಪಾಲ್ಗೊಳ್ಳುವಿಕೆಯಿಂದ ನಿರ್ಲಕ್ಷಿತ ಹಾಗೂ ತುಳಿತಕ್ಕೊಳಗಾದ ಮಹಿಳೆಯ ಸಬಲೀಕರಣವಾಗಲು ಸಾಧ್ಯ.

**ಮಹಿಳೆಯರ ಶೈಕ್ಷಣಿಕ ಮಟ್ಟವನ್ನು ಹೆಚ್ಚಿಸುವುದು**

ಶಿಕ್ಷಣದ ಎಲ್ಲಾ ಕ್ಷೇತ್ರಗಳಲ್ಲಿ ಹೆಣ್ಣು ಮಕ್ಕಳ ಶಾಲಾ ಬಿಡುವಿಕೆ ಪ್ರಮಾಣ ಕಡಿಮೆಗೊಳಿಸಬೇಕು, ಗ್ರಾಮೀಣ ಮಹಿಳೆಯರ ಸಾಕ್ಷರತಾ ಮಟ್ಟ ಹೆಚ್ಚಿಸಬೇಕು, ಗ್ರಾಮೀಣ ಹೆಣ್ಣು ಮಕ್ಕಳು ಲಭ್ಯವಿರುವ ಕಂಪ್ಯೂಟರ್ ಹಾಗೂ ಇನ್ನಿತರೆ ತಾಂತ್ರಿಕ ಕೋರ್ಸ್‌ಗಳು ಹಾಗೂ ಕೌಶಲ್ಯಗಳಲ್ಲಿ ಪರಿಣಾಮಕಾರಿಯಾಗಿ ತೊಡಗಿಸಿಕೊಳ್ಳುವಂತೆ ಮಾಡಬೇಕು.

**ಉಪಸಂಹಾರ**

ಮೇಲ್ಕಂಡ ವಿಷಯಗಳೊಂದಿಗೆ ಮಹಿಳೆಯರಿಗಾಗಿ ಸರ್ಕಾರವು ಕಾರ್ಯರೂಪಕ್ಕೆ ತಂದಿರುವ ಮಾತೃಪೂರ್ಣ, ಮಾತೃವಂದನಾ ಮಾತೃಶ್ರೀ ಮುಂತಾದ ಕಾರ್ಯಕ್ರಮಗಳ ಬಗ್ಗೆ ಮಹಿಳೆಯರಲ್ಲಿ ಅರಿವು ಮೂಡಿಸುವುದು ಹಾಗೂ ಮಹಿಳೆಯರ ಭಾಗವಹಿಸುವಿಕೆಯೊಂದಿಗೆ ಈ ಎಲ್ಲಾ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವುದರ ಮೂಲಕ ಮಹಿಳೆಯರು ಗ್ರಾಮ ಪಂಚಾಯತಿ ಮಟ್ಟದಲ್ಲಿ ವಯಕ್ತಿಕ ನಿರ್ಧಾರಗಳನ್ನು ತೆಗೆದುಕೊಳ್ಳುವಂತೆ ಮಾಡುವ ನಿಟ್ಟಿನಲ್ಲಿ ಅವರನ್ನು ಸಭಲೀಕರಣಗೊಳಿಸಲು ವರ್ಷಕ್ಕೆ ಒಂದು ಬಾರಿ ಮಹಿಳಾ ವಿಶೇಷ ಗ್ರಾಮಸಭೆಯನ್ನು ಆಯೋಜಿಸುವುದು ಗ್ರಾಮಪಂಚಾಯತಿಗಳ ಕರ್ತವ್ಯವಾಗಿದೆ. ಎಂಬುದನ್ನು ಈ ಅಧ್ಯಯನದಿಂದ ಮೂಡಿಬಂದಿದೆ.

**ಪರಾಮರ್ಶನ ಗ್ರಂಥಗಳು**

1. "ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ" ಕಾಯ್ದೆಯ ಪ್ರತಿ, 1993.
2. ಕರ್ನಾಟಕ ವಿಕಾಸ ಮಾಸ ಪತ್ರಿಕೆ
3. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ಹೊರಡಿಸಲಾದ ಸುತ್ತೋಲೆಗಳು